**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಓ ಎಸ್ 6/2020**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ದಿನಾಂಕಃ 24.03.2026** **ಪಿ ಡಬ್ಲ್ಯೂ 1**

**ಮುಂದುವರೆದ ಪಾಟೀ ಸವಾಲುಃ** ಪ್ರತಿವಾದಿ ಪರ ಶ್ರೀ ಎಂ ಆರ್ ವಕೀಲರಿಂದಃ

ನಿಪಿ.25 ನ್ಯಾಯಾಲಯದ ಮುಖಾಂತರ ಮಾಡಿಕೊಂಡ ತಿದ್ದುಪಡಿ ಪತ್ರ ಎಂದರೆ ಸರಿ. ನಿಪಿ.25 ರಲ್ಲಿ ಬರೆಸಿರುವ ಚೆಕ್ ಬಂದಿ ಹಾಗೂ ದಾವಾ ಆಸ್ತಿಯ ಚೆಕ್ ಬಂದಿಗೂ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ದಾವಾ ಅರ್ಜಿಯ ದಾವಾ ಆಸ್ತಿಯ ಪೂರ್ವಕ್ಕೆ ಭದ್ರಾ ಚಾನಲ್ ಹಾಗೂ ಅದರಾಚೆ ನಮ್ಮ ಪೈಕಿ ಜಮೀನು ಎಂದು ಬರೆಸಿದ್ದೇನೆ ಎಂದರೆ ಸರಿ. ಆದರೆ ನಿಪಿ.25 ರಲ್ಲಿ ಶೆಡ್ಯೂಲ್ ಆಸ್ತಿಯ ಪೂರ್ವಕ್ಕೆ ಕೇವಲ ಭಧ್ರಾ ಚಾನಲ್ ಇದೆ ಎಂದು ನಮೂದು ಇದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ.25 ರಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಗೆ ನಾನು ಸಾಕ್ಷಿದಾರನಾಗಿ ಸಹಿ ಮಾಡಿದ್ದೇನೆ. ಸಾಕ್ಷಿಯು ಗುರುತಿಸಿದ ಸಹಿಯನ್ನು ನಿಪಿ.25(ಎ) ಎಂದು ಗುರುತಿಸಲಾಯಿತು. ನಿಪಿ.25 ರ ಆಧಾರದ ಮೇಲೆ ದಾವಾ ಆಸ್ತಿಯ ಗೇಣಿ ಮತ್ತು ಪಹಣಿ ಪತ್ರಿಕೆಗಳು ಬಂದಿರುತ್ತವೆ ಎಂದರೆ ಸರಿ. ನಿಪಿ.25 ರಲ್ಲಿ ನಮೂದಿಸಿದ ಆಸ್ತಿ, ದಾವಾ ಆಸ್ತಿಯ ಚೆಕ್ ಬಂದಿ ಬೇರೆ ಬೇರೆ ಇದ್ದರೂ ಸಹ ಆಸ್ತಿಯನ್ನು ಕಬಳಿಸಬೇಕು ಎಂಬ ಉದ್ದೇಶದಿಂದ ದಾವಾ ಆಸ್ತಿಯಲ್ಲಿ ಸುಳ್ಳು ಚೆಕ್ ಬಂದಿ ತೋರಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ.25 ರ ಆಧಾರದ ಮೇಲೆ ನಾನು ಬ್ಯಾಂಕನಲ್ಲಿ ಸಾಲವನ್ನು ತೆಗೆದುಕೊಂಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ .**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

sd/

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ, ಹರಿಹರ